ಬರುವಾಗ ಕೊಟ್ಟಿದ್ದ ಗೆಜ್ಜೆ ಟೀಕಿ ನಂತರ ಅಪ್ಪ ಚೆಂಬಣ್ಣ ಮಾಡಿಸಿಕೊಟ್ಟ ಯಾವ ದಾಗೀನು ಇರಲಿಲ್ಲ. ಮುತ್ತಿನ ಬುಗಡಿ ತಮ್ಮವ್ವ ಯಾವಾಗ್ಲೂ ಹಾಕ್ಕೊಂಡಿದ್ದು ಶಾರವ್ವ ನೋಡಿಯೇ ಇರಲಿಲ್ಲ. ಅಂತಾದರಾಗ ಅತ್ತಿಗೆ ಕಮಲವ್ವನ ಈ ಆರೋಪಕ್ಕೆ ಶಾರವ್ವನು ದಂಗಾಗಿ ಕುಂತಿದ್ಲು. ಎದ್ಯಾಗ ಬೈರಿಗೆಯನ್ನಿಟ್ಟಂಗಾಗಿ, ಆಕಾಶವೇ ದೊಪ್ಪನ ತಲೆಮ್ಯಾಲ ಕಡಕೊಂಡು ಬಿದ್ದಂಗಾಗಿ ಗೌರಮ್ಮಗ, ಮಾತು ಬರದೆ ಬೆಪ್ಪರತರಾ ನಿಂತಿದ್ಲು. ಹೊತ್ತು ಹೊಂಟಕೂಡ್ಲೆ ಮಗನ ಮದುವಿ ತಯಾರಿ ನಡಿಸಬೇಕಿದ್ದ ಗೌರವ್ವ ಗೌಡಶಾನಿಗೆ ಕಣ್ಣು ಮುಂಜಾದವು. ಸೇರಿದ ಜನರಮುಂದ ಗೌರವ್ವನಮ್ಯಾಲ ಬಂದ ಅಪವಾದಕ್ಕೆ ಏನ ಉತ್ತರ ಕೊಡಬೇಕೋ ತಿಳಿದ ಸೆರಗ ಬಾಯಿಗೆ ಹಿಡಕೊಂಡು ಅಳಾಕತ್ತಿದ್ಲು. ಸಾಹುಕಾರ ಬಸಲಿಂಗಪ್ಪ ಈ ಸುದ್ದಿ ಕೇಳಿ ಅಡಬಡಿಸಿ ಪಡಸಾಲಿಗೆ ಬಂದ ಧರ್ಮದೇವತೆಯಂತಹ ತನ್ನ ಹೆಂಡತಿ ಮೇಲೆ ಹೊರಸಿರೊ ಅಪವಾದಕ್ಕೆ ಏನ ಮಾತಾಡಬೇಕೋ ತಿಳಿಯದ ಗ್ವಾಡಿ ನಿಂತಂಗ ನಿಂತಾ. ಪ್ರವಾಹ ಬಂದಂಗ ಗುಡುಗುಸಿಡಲು ಒಮ್ಮೆ ಮೈಮೇಲೆ ಬಿದ್ದಂಗ ಆಗಿ ಗೌಡಶಾನಿ ತಟಸ್ಥಳಾದಳು.

ಸುತ್ತ ಏಳು ಊರ ಜನರ ಮುಂದ ಗೌಡಶಾನಿ ಮಾನ ಮರ್ಯಾದೆ ಹಿಂಗ ಆಕ್ಕೈತಿ ಅಂತಾ ಯಾರೂ ತಿಳಿದಿರಲಿಲ್ಲ. ಸೊಸಿ ಕಮಲವ್ವ ಒಂದೇ ಸವನೆ ಅತ್ತಿ ಗಲ್ಲಾ ತೀವಿತಾ, 'ನಿನ್ನ ಜೀವದ ಗೆಳತಿ ಗೌಡಶಾನಿ ನಮಗ ಮೋಸಾ ಮಾಡ್ಯಾಳ. ನಿನ್ನ ದಾಗೀನ ಇಟಕೊಂಡು ಇಲ್ಲಾ ಅಂತಾಳ' ಅಂತಾ ಜೋರಾಗಿ ಎದಿ ಬಡಕೊಂಡು ನಾಟಕ ಶುರುಮಾಡಿದ್ಲು. ಗೌರಮ್ಮ ಮಾತ್ರ ನೆರೆದ ಜನರ ಮುಂದ ಪ್ರಮಾಣ ಮಾಡಿದ್ಲು. 'ಸಾವಂತ್ರಿ ಯಾವ ದಿನ ಈ ಗಂಟು ನನ್ನ ಉಡ್ಯಾಗ ಹಾಕ್ಯಾಳ ಅದನ್ನು ಹಂಗ ಇವತ್ತು ಜೋಪಾನದಿಂದ ನಿಮ್ಮ ಮನಿಗಿ ತಂದ ಮುಟ್ಟಸಿನಿ' ಅಂದಳು.

ಕಮಲವ್ವ ಮಾತ್ರ ಯಾವುದನ್ನ ಕಿವಿಗೆ ಹಾಕ್ಕೊಳದ, ನೋಡ್ರಿಲ್ಲಿ ಅಂತಾ ದೈವದ ಮುಂದೆ ಒಂದೇ ಬುಗುಡಿ ತೊರಸ್ತಾ, 'ಇನ್ನೊಂದು ಎಲ್ಲಿ ಹೊತು, ಸರಾ ಎಲ್ಲಿ ಹೋತು' ಅಂತಾ ರಂಪಾಟ ಹಿಡಿದ್ಲು. ಈವರೆಗೂ ಇನ್ನೊಬ್ಬರ ವಸ್ತುಮ್ಯಾಲೆ ಆಶೆಮಾಡದ, ಧರ್ಮದಸರಿ ನಡಕೊಂಡ ಗೌಡಶಾನಿಗೆ ಇದು ಅಗ್ನಿ ಪರೀಕ್ಷೆ ಆಯಿತು.

ಊರಾಗಿನ ಅನೇಕ ಅವ್ವಕ್ಕಗಳು ಬಹಳ ನಂಬಿಕೆಯಿಂದ ತಮ್ಮ ಕಡೆಯ ದಾಗೀನುಗಳನ್ನು ಗೌರವ್ವ ಗೌಡಶಾನಿ ಉಡ್ಯಾಗ ಹಾಕಿ ಬರತಿದ್ರು. ಈವರೆಗೂ ಸುಮಾರು ನೂರಾರು ಜನ ಹೆಣ್ಣುಮಕ್ಕಳು ಅಗದಿ ನಂಬಿಕೆಯಿಂದ ತಮ್ಮ ದಾಗೀನುಗಳನ್ನು ಅರಿವಿಗಂಟಿನ್ಯಾಗ ಬಣ್ಣದ ಅರಿವಿಗುರ್ತು ಮಾತ್ರ ಮಾಡಿ ಇಟಕೊಳ್ಳಾಕ ಕೊಡತಿದ್ದರು. ಅಕಸ್ಮಾತಾಗಿ ಅವರು ಸತ್ತರು ಅಂದ್ರ, ಗೌರಮ್ಮ ಗೌಡಶಾನಿ ಬಹಳ ನಿಷ್ಠೆಯಿಂದ ಆ ಗಂಟನ್ನು ತಂದು ಹೆಣದ ಮುಂದ ಮನಿಯವರ ಕೈಯಾಗ ಕೊಡೊದು ವಾಡಿಕೆ ಆಗಿತ್ತು. ಹಿಂಗಾಗಿ, ಸಾವಂತ್ರಿ ಹೆಣದ ಮುಂದೆ ಗೌಡಶಾನಿ ಬರೋವರೆಗೂ ಜನ ಕಾಯತಾ ಇದ್ದರು. ಸುಮಾರು ಮೂವತ್ತು ವರ್ಷಗಳಿಂದ ನ್ಯಾಯನಿಷ್ಠುರಿಯಾಗಿ ಧರ್ಮದ ಸರಿಯಾಗಿ ಅವರವರ ದಾಗೀನು ಅವರವರ ಹಣ ಅವರವರ ರೇಷ್ಮೆ ಸೀರೆಗಳನ್ನು ಜೋಪಾನವಾಗಿ ಒಪ್ಪಸ್ತಿದ್ಲು. ಹಿಂಗಾಗಿ, ಸುತ್ತೇಳು ಹಳ್ಳಿ ಜನರಿಗೆ ಗೌರಮ್ಮನ ಬಗ್ಗೆ ಅಪಾರ ಪ್ರೀತಿ, ಗೌರವ, ನಂಬಿಕೆ ಇತ್ತು. ಆದರೆ, ಅತೀ ಪ್ರೀತಿಯ ಗೆಳತಿ ಸಾವಂತ್ರಿಯ ದಾಗೀನುಗಳ ವಿಷಯದಲ್ಲಿ ಹಿಂಗ್ಯಾಕಾತು ಅಂತಾ ತಿಳಿಯದೆ ಅವಮಾನಿತಳಾಗಿ ಗೌರಮ್ಮ ನೊಂದುಕೊಂಡಳು.

ಸಾವಂತ್ರಿಯ ಅಂತ್ಯಸಂಸ್ಕಾರ ಮಾಡಿದನಂತರ ಮರುದಿನ ಪಂಚಾಯತಿ ಕೂಡಿ ಈ ಸಮಸ್ಯೆ ಬಗೆಹರಿಸೋದು ಅಂತಾ ತೀರ್ಮಾನ ಆತು. ರಾತ್ರಿಯಿಡಿ ಗೌಡಶಾನಿ ಅತ್ತು ಅತ್ತು ಕಣ್ಣುಕೆಂಪಗೆ ಮಾಡಿಕೊಂಡಿದ್ಲು. ಬಸಲಿಂಗಪ್ಪನೂ ಒಳಗೊಳಗೆ ಕಸಿವಿಸಿ ಆಗಿ ನೋವು ಅನುಭವಿಸಿದ್ದಾ. ಮುಂಜಾನೆ ಪಂಚಾಯತಿಲಿ ಏನ ತೀರ್ಮಾನ ಆಕ್ತದ, ಏನ ಅವಮಾನ ಆಕ್ತದೋ ಅಂತಾ ರಾತ್ರಿ ಪೂರ್ತಿ ನಿದ್ದೆ ಮಾಡಲಿಲ್ಲಾ ಇಬ್ಬರು.

ಮುಂಜಾನೆ ಸಾವಂತ್ರಿ ದಾಗೀನು ಸಲುವಾಗಿ ತೀರ್ಮಾನಕ್ಕಾಗಿ ಊರ ಜನ ಸೇರಿದ್ರು. ನಿನ್ನೆ ಹೆಣದ ಮುಂದ ವಾದಾ ಹಾಕಿದಂಗ ಮತ್ತ ಸೊಸಿ ಕಮಲವ್ವ, ಜೋರಾಗಿ ಬಾಯಿ ಬಡಕೋತ ಹೇಳಾಕ ನಿಂತ್ಲು ಕೂಡಿದ ದೈವಕ್ಕ. ಗೌಡಶಾನಿ ಗೌರಮ್ಮ ಮಾತ್ರ ಬಹಳ ನೋವಿನಿಂದ 'ಸಾವಂತ್ರಿ ತಂದ ಗಂಟು ನಾ